**OS: 463-2018**
**PW-1**

<u>ಪ್ರಮಾಣ ವಚನ ಬೋಧಿಸಿದ ದಿನಾಂಕಃ 13.06.2019</u>
<u>ಮುಖ್ಯ ವಿಚಾರಣೆಃ ಶ್ರೀ. ಎಸ್ ಜಿ ಕೆ ವಾದಿ ಪರ ವಕೀಲರಿಂದ.</u>

ನಾನು ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣ ಮಾಡಿರುತ್ತೇನೆ.

ದಾವಾ ಆಸ್ತಿಗೆ ಸಂಬಂಧಪಟ್ಟ ಹಾಗೇ ಭಾಗೀರಥಿಬಾಯಿ ಇವರು ತನ್ನ ಮಗನ ಹೆಸರಿಗೆ ಬರೆದುಕೊಟ್ಟ ನೋಂದು ದಾನ ಪತ್ರದ ದೃಢಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ–1 ಎಂದು ಗುರುತಿಸಲಾಯಿತು. ಅದರ ಇಂಗ್ಲಿಷ ಅನುವಾದವನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ದಾವಾ ಆಸ್ತಿಗೆ ಸಂಬಂಧಪಟ್ಟ ನಮೂನೆ 8 ನ್ನು ಹಾಜರುಪಡಿಸಿದ್ದು ಅದನ್ನು ನಿಪಿ–2 ಎಂದು ಗುರುತಿಸಲಾಯಿತು. ದಾವಾ ಆಸ್ತಿಗೆ ಸಂಬಂಧಪಟ್ಟ ಗ್ರಾಮ ನಕಾಶೆಯ ದೃಢಿಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ–3 ಎಂದು ಗುರುತಿಸಲಾಯಿತು. 2 ಕರ ರಶೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ–4 ಮತ್ತು 5 ಎಂದು ಗುರುತಿಸಲಾಯಿತು. ತಹಶಿಲ್ದಾರ ಬೆಳಗಾವಿ ಇವರು ನೀಡಿದ ಮೃತರ ಕುಟುಂಬ ಜೀವಂತ ಸದಸ್ಯರ ದೃಢಿಕರಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ–6 ಎಂದು ಗುರುತಿಸಲಾಯಿತು. ನನ್ನ ಅಜ್ಜನ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ–7 ಎಂದು ಗುರುತಿಸಲಾಯಿತು. ಕಬೂಲಿ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ–8 ಎಂದು ಗುರುತಿಸಲಾಯಿತು. ಪಿ ಆ್ಯಂಡ ಎಸ್ಸಿ ನಂ. 22/2014 ರ ದೃಢಿಕರಣ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ–9 ಎಂದು ಗುರುತಿಸಲಾಯಿತು. ತಹಶಿಲ್ದಾರ ಇವರಿಗೆ ಸಲ್ಲಿಸಿದ ಅರ್ಜಿಯ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ–10 ಎಂದು ಗುರುತಿಸಲಾಯಿತು. ದಿಃ 18.08.2018 ರ ಆರ್ ಟಿ ಯ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ–11

ಎಂದು ಗುರುತಿಸಲಾಯಿತು. ಅದರ ರಶೀದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ–11 ಎ ಎಂದು ಗುರುತಿಸಲಾಯಿತು. ಗ್ರಾಮ ಪಂಚಾಯತಿ ಕಂಗ್ರಾಳಿ ಇವರು ನೀಡಿದ ಹಿಂಬರಹವನ್ನು ಹಾಜರುಪಡಿಸಿದ್ದು ಅದನ್ನು ನಿಪಿ–12 ಎಂದು ಗುರುತಿಸಲಾಯಿತು. 2 ಪೋಟೋಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ–13 ಮತ್ತು 14 ಎಂದು ಗುರುತಿಸಲಾಯಿತು. ಸಿಡಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ–14 ಎ ಎಂದು ಗುರುತಿಸಲಾಯಿತು.

ಪ್ರತಿವಾದಿ ಪರ ವಕೀಲರು ಗೈರು ಹಾಜರು ಇರುವುದರಿಂದ ಪಾಟೀ ಸವಾಲಿಗೆ ಮುಂದೂಡಲಾಯಿತು.

(ತೆ. ನ್ಯಾ ಸಾಕ್ಷಿಯ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿಯಿದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ. ಎಂ. ಎಫ್. ಸಿ., ಬೆಳಗಾವಿ.